SRI K. H. RANGANATH.— I beg to move

"That the Karnataka Money Lenders (Amendment) Bill, 1976, as amended, be passed."

MADAM SPEAKER,— The question is :

"That the Karnataka Money Lenders (Amendment) Bill, 1976, as amended be passed"

The motion was adopted and the Bill, as amended was passed.

KARNATAKA DEBT RELIEF BILL, 1976,

Motion to Consider

SRI K. H. RANGANATH (Minister for Co-operation). — I move :

"That the Karnataka Debt Relief Bill, 197 be taken in to consideration."

MADAM SPEAKER . - Motion moved

"That the Karnataka Debt Relief Bill, 1976, be taken into consideration."

† ಶ್ರೀ ಕೆ. ಎಚ್. ರಂಗನಾಥ್.—ಸನ್ಮಾನ್ಯ ಅಧ್ಯಕ್ಷರೇ ಇದರಲ್ಲಿ ಬಹಳ ಒದಲಾವಣೆಗಳನು ಏನೂ ಮಾಡಿಲ್ಲ. ಈಗ ಇರುವ ಹಾಗೆ ಹೇಳಿದತಕ್ಕಂಥ ಕಾನೂನಿನಲ್ಲಿ ಸಬ್ ಡಿವಿಜನ್ ಅಫೀಸರ ರವರಿಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಈ ಕಾನೂನಿನಂತೆ ಏರ್ಪಾಡನ್ನು ಮಾಡುವಾಗ ಸ್ವಲ್ಪ ತೊಂದರೆ ಬಂದು ದರಿಂದ ಈ ಅಧಿಕಾರವನ್ನು ಮ್ಯಾಜಿಸ್ಟ್ರೇಟರವರಿಗೆ ಕೊಡಬೇಕು ಎನ್ನತಕ್ಕಂಥ ಉದ್ದೇಶದಿಂದ ತಿದ್ದು ಪಡಿಯನ್ನು ತರಲಾಗಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ ಸುಮಾರು ೩,೯೬೧ ಲೈಸನ್ಸ್ಡ್ ಮನಿಲೆಂಡರ್ಸ್ ಇದ್ದಾರೆ. ೩,೩೨೫ ಪಾನ್ ಬ್ರೋಕರ್ಸ್ ಇದ್ದಾರೆ. ಇವರಲ್ಲಿ ಕೆಲವರು ಕೋರ್ಟಿಗೆ ಹೋಗಿ ಸ್ಟೇ ತಂದಿರತಕ್ಕದ್ದು ಉಂಟು. ಈ ಕಾನೂನು ಬಂದ ಮೇಲೆ ಇಲ್ಲಿಯವರೆಗೆ ಅಂದರೆ ಅಕ್ಟೋಬರ್ ತಿಂಗಳ ೨೧ನೇ ತಾರೀಖಿನವರೆಗೆ ೧ ಲಕ್ಷದ ೨೫ ಸಾವಿರದ ೪೬೦ ಜನ ಇದರಿಂದಾ ಅನುಕೂಲವನ್ನು ಪಡೆದಿದ್ದಾರೆ ಋಣ ವಿಮುಕ್ತ ಪರಿಹಾರ ಕಾಯ್ದೆಯಿಂದ ಅನುಕೂಲವನ್ನು ಹೊಂದಿದ್ದಾರೆ ಅದರಿಂದ ಹಣ ಎಷ್ಟರ ಮಟ್ಟಿಗೆ ಬಿಡುಗಡೆಯಾಗಿದೆ ಎಂದರೆ ಒಟ್ಟು ೭ ಕೋಟಿ ೯೭ ಲಕ್ಷದ ೧೯ ಸಾವಿರದ ೩ ೭ ರೂಪಾಯಿಗಳ ಹಣ ಇಲ್ಲಿಯವರೆಗೆ ಬಿಡುಗಡೆ ಮಾಡಲು ಟ್ಟಿದೆ ಇದರಲ್ಲಿ ೧ ಲಕ್ಷದ ೨೫ ಸಾವಿರದ ೪೬೦ ಜನಕ್ಕೆ ಪರಿಹಾರ ಕೊಟ್ಟಿದ್ದೇವೆ ಇದರಲ್ಲಿ ೩೨,೫೩೪ ಜನ ಹರಿಜನರು, ೨ ೩೪೬ ಗಿರಿಜನರು ಇದ್ದಾರೆ. ೭ ಕೋಟಿ ೯೭ ಲಕ್ಷ ರೂಪಾಯಿಗಳಲ್ಲಿ ಇವರಿಂದ ಬಿಡುಗಡೆ ಆದಂಥದ್ದು ೧ ಕೋಟಿ ೩೭ ಲಕ್ಷದ ೪೭ ಸಾವಿರದ ೩೩೭ ಮತ್ತು ೧೧ ಲಕ್ಷದ ೧೧ ಸಾವಿರದ ೩೭೫ ಅಂದರೆ ಸುಮಾರು ೧ ಕೋಟಿ ೫೧ ಲಕ್ಷ ರೂಪಾಯಿಗಳು ಹರಿಜನ ಗಿರಿಜನ ರಿಂದವಸೂಲಾಗಿದೆ ಇಷ್ಟು ವ್ಯಾಪಕವಾಗಿರತಕ್ಕಂಥ ಕಾನೂನನ್ನು ಜಾರಿಗೆ ಕೊಡಬೇಕಾದರೆ ಸಬ್‌ಡಿವಿಜನಲ್ ಅಫೀಸರ್‌ರವರಿಗೆ ಅಧಿಕಾರವನ್ನು ಕೊಟ್ಟರೆ ಅವರು ಅದನ್ನು ಶೀಘ್ರಗತಿಯಲ್ಲಿ ಜನರಿಗೆ ಜಾರಿಗೆ ಕೊಡ ಲಾಗುವುದಿಲ್ಲ. ಈ ದೃಷ್ಟಿಯಿಂದ ಈ ಅಧಿಕಾರವನ್ನು ತಹಶೀಲ್ದಾರರ ಮಟ್ಟದಲ್ಲಿ ಅಧಿಕಾರವನ್ನು ಡೆಲಿ ಗೇಟ್ ಮಾಡಬೇಕೆಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರಲ್ಲಿ ಇನ್ನು ಹೆಚ್ಚು ವಿಷಯ ಇಲ್ಲ. ಈ ತಿದ್ದು ಪಡಿಯು ಆಡಳಿತದ ದೃಷ್ಟಿಯಿಂದ ಅನುಕೂಲದಾಯಕವಾಗಿರುವುದರಿಂದ ಮಾನ್ಯ ಸಭೆಯಂ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿ ವನ್ನ ಮಾತನ್ನು ಮುಗಿಸುತ್ತೇನೆ.

3-30 P. M.

[MR. DEPUTY SPEAKER in the Chair]

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಹಕಾರ ಸಚಿವರು ಮಂಡಿಸಿರುವ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಸಚಿವರು, ಇಲ್ಲಿ ಅಧಿಕಾರವನ್ನು ವಿಕೇಂದ್ರ ಗೊಳಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಬಗ್ಗೆ, ಕಳೆದ ಅಧಿವೇಶನದಲ್ಲಿ ನಾವು, ಈ ಕಡೆಯಿಂದ ಪ್ರಸ್ತಾಪ ಮಾಡಿದ್ದೆವು. ಋಣ ಪರಿಹಾರ ಕಾನೂನು ಬಂದಮೇಲೆ, ಇದರ ಅಧಿಕಾರ ವ್ಯಾಪ್ತಿಗೆ ಬರದೇ ಇರತಕ್ಕ ಮತ್ತು ಅಧಿಕಾರವನ್ನು ಪಡೆಯದೇ ಇರತಕ್ಕ ವ್ಯಕ್ತಿಗಳು ಗ್ರಾಮಸೇವಕರಿಂದ ಹಿಡಿದು, ಬಿ.ಡಿ.ಓ. ಯಿಂದ ಹಿಡಿದು, ಯಾರು ಯಾರೋ ೨೦ ಅಂಶದ ಕಾರ್ಯಕ್ರಮ ಎಂದು ಬೋರ್ಡ್ ಹಾಕಿ ಕೊಂಡು ಋಣ ಪರಿಹಾರ ಕಾನೂನನ್ನು ಜಾರಿಗೊಳಿಸುತ್ತಿದ್ದೇವೆ ಎಂದು ಊರೊಳಗೆಲ್ಲಾ ಹೋಗುತ್ತಿದ್ದರು ಹೀಗಾಗಿ ಋಣ ಪರಿಹಾರ ಕಾನೂನಿನ ಕಾರ್ಯಾಚರಣೆಯಲ್ಲಿ ಗೊಂದಲವುಂಟಾದುದನ್ನು ನಾವು ನೋಡಿದ್ದೇವೆ ಅಂಥದ್ದೇನಾದರೂ ದೊಡ್ಡ ಅನಾಹುತವಾದರೆ, ಅದರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸಚಿವರು ಭರವಸೆ ನೀಡಿದ್ದರು. ತದನಂತರ ಸ್ವಲ್ಪವಂಟ್ಟಿಗೆ ಕಡಿಮೆಯಾಗಿದ್ದು, ಈಗ ಮತ್ತೆ ಎಲ್ಲ ಕಡೆ ಶುರುವಾಗಿದೆ. ಆದುದರಿಂದ, ಈ ವಿಚಾರದಲ್ಲಿ, ಅಸಿಸ್ಟೆಂಟ್ ಕಮಿಷನರುಗಳಿಗೆ ಮತ್ತು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರಿಗಿದ್ದ ಅಧಿಕಾರವನ್ನು ತಹಶೀಲ್ದಾರರಿಗೆ ಡೆಲಿಗೇಟ್ ಮಾಡುವುದರ ಬದಲು, ತಹಶೀಲ್ದಾರರಿಗೆ ಪೂರ್ಣ ಅಧಿಕಾರವನ್ನು ಕೊಡತಕ್ಕದ್ದು ನ್ಯಾಯ ಎನ್ನುವುದು ನನ್ನ ಅಭಿಪ್ರಾಯ. ಇತ್ತೀಚೆಗೆ ಅಸಿಸ್ಟೆಂಟ್ ಕಮಿಷನರಿಗೆ ಹೇರಳವಾದ ಕೆಲಸ ಶುರುವಾಗಿದೆ. ಭೂ ನ್ಯಾಯ ಮಂಡಲಿಗಳ ಕೆಲಸ ಇದೆ, ಬೇರೆ ಅಪೀಲುಗಳನ್ನು ನೋಡತಕ್ಕ ಕೆಲಸಗಳು ಅವರಿಗಿವೆ. ಆದುದರಿಂದ, ಪ್ರತಿಯೊಂದು ತಾಲ್ಲೂಕಿನ ತಹಶೀಲ್ದಾರರಿಗೂ ಇದರ ಬಗ್ಗೆ ಪೂರ್ಣ ಅಧಿಕಾರವನ್ನು ಕೊಡುವುದು ನ್ಯಾಯ.

ಶ್ರೀ ಕೆ. ಎಚ್. ರಂಗನಾಥ್.—ತಹಶೀಲ್ದಾರರಲ್ಲದೆ ಬೇರೆ ಯಾರಿಗೂ ಮ್ಯಾಜಿಸ್ಟ್ರೇಟರ ಅಧಿಕಾರ ವಿರುವುದಿಲ್ಲ. ಮ್ಯಾಜಿಸ್ಟ್ರೇಟರಿಗಿರುವ ಅಧಿಕಾರ ಇವರಿಗೂ ಇರುವುದರಿಂದ, ತಹಶೀಲ್ದಾರರೇ ಇದನ್ನು ಮಾಡಬಹುದಲ್ಲಾ, ಆದರೆ, ನೇರವಾಗಿ ನಾವು 'ತಹಶೀಲ್ದಾರರೇ' ಎಂದು ಹೇಳಿಲ್ಲ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೆಲವು ಕಡೆ ಅಸಿಸ್ಟೆಂಟ್ ಕಮಿಷನರುಗಳು ಮ್ಯಾಜಿಸ್ಟ್ರೇಟರ ಪವರ ಗಳನ್ನು ಎಕ್ಸೈಸ್ ಮಾಡುತ್ತಾರೆ. ಆದುದರಿಂದ, ಇಲ್ಲಿ ನಾವು ನೇರವಾಗಿ 'ತಹಶೀಲ್ದಾರರಿಗೇ' ಪೂರ್ಣ ಅಧಿಕಾರ ಕೊಟ್ಟುಬಿಟ್ಟರೆ, ಈ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಸಿಸ್ಟೆಂಟ್ ಕಮಿಷನರುಗಳಿಗೆ, ಅವರವರ ಪ್ರದೇಶಗಳಲ್ಲಿ ಮೇಲ್ವಿಚಾರಣೆ ಮಾಡುವ ಅನೇಕ ಕೆಲಸಗಳಿರುತ್ತವೆ. ಅಷ್ಟೇ ಅಲ್ಲದೆ, ಇದಕ್ಕೆ ಸಂಬಂಧ ಪಟ್ಟ ಅರ್ಜಿಯನ್ನು ಯಾರಿಗೆ ಕೊಡಬೇಕೆಂದು ಇಲ್ಲಿ ಅರ್ಥವಾಗುವುದಿಲ್ಲ. ಯುವ ಕಾಂಗ್ರೆಸ್‌ನವರಿಗೆ ಕೊಟ್ಟರೆ ಅಥವಾ ವಿಲೇಜ್ ಅಕೌಂಟೆಂಟ್‌ಗೆ ಕೊಟ್ಟರೆ, ಅಥವಾ ಗ್ರಾಮಸೇವಕರಿಗೆ ಕೊಟ್ಟರೆ—ಎಲ್ಲಾ ಸೇರಿ ಯಾರು ಯಾರ ಮೇಲೋ ದಾಳಿ ಮಾಡಿ, ಆಗಬಾರದ್ದಾದರೆ, ಬಹಳ ಕಷ್ಟ. ಕಾನೂನು ಪ್ರಕಾರವಾಗಿ, ನೇರವಾಗಿ, ಯಾರು ಪರಿಹಾರವನ್ನು ಪಡೆಯಬೇಕೋ ಆ ಜನ ಮಾತ್ರ ಪಡೆಯುವಂತಾಗಬೇಕು. ಇದು ಅಸ್ತಿ ವರ್ಗಾವಣೆಗೆ ಸಂಬಂಧಪಟ್ಟ ವಿಷಯ ಹಿಂದೆ ಈ ಒಂದು ಅಧಿಕಾರವನ್ನು ಅಸಿಸ್ಟೆಂಟ್ ಕಮಿಷನರಿಗೆ ಇತ್ತು. ಅಲ್ಲಿ ಅವರು ಸಾರ್ವಜನಿಕರಿಂದ ಬಂದ ಅರ್ಜಿಗಳನ್ನು ಗಮನಿಸುತ್ತಿದ್ದರು, ಅವುಗಳಿಗೆ ಒಂದು ನಂಬರ್ ಕೊಡುತ್ತಿದ್ದರು ನಂತರ ಸಂಬಂಧಪಟ್ಟವರಿಗೆ ನೋಟೀಸ್ ಕೊಟ್ಟು, ವಿಚಾರಣೆ ನಡೆಸುವ ಕ್ರಮವಿತ್ತು. ಆದರೆ ತಾವು ಹೇಳಿದ ಲೆಕ್ಕ ತೆಗೆದುನೋಡುವುದಾದರೆ ಅದರಲ್ಲಿ ಯಾರು ಯಾರು, ಅಂದರೆ ಬಿ.ಡಿ.ಓ. ಎಷ್ಟು ವಸೂಲು ಮಾಡಿದ್ದಾರೆ, ಗ್ರಾಮಸೇವಕರೆಷ್ಟು ವಸೂಲು ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ?

ಶ್ರೀ ಕೆ. ಎಚ್. ರಂಗನಾಥ್.—ಸಬ್ ಡಿವಿಜನಲ್ ಆಫೀಸರ್ ಕಡೆಯಿಂದ ಬಂದಿರತಕ್ಕ ಲೆಕ್ಕವೇ ೧,೨೫,೪೭೦ ಜನಗಳಿಗೆ ಸಂಬಂಧಪಟ್ಟದ್ದು. ಅವರಿಂದ ಆಗದಿದ್ದರೆ ಈ ಕರಾರುವಕ್ಕಾದ ಲೆಕ್ಕ ಸಿಕ್ಕುತ್ತಿರಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ — ಹಾಗಿದ್ದರೆ ಗ್ರಾಮಸೇವಕರು ಕೊಡಿಸಿರುವ ಲೆಕ್ಕ ಎಲ್ಲಿ ಹೋಯಿತು? ಕೆಲವರು ಪಾದಯಾತ್ರೆ ಮಾಡಿ ಕೊಡಿಸಿರುವ ಲೆಕ್ಕ ಎಲ್ಲಿ ಹೋಯಿತು? ಯುವ ಕಾಂಗ್ರೆಸ್ಸಿನವರು ಮತ್ತು ವಿಶೇಷ ಪೆಲ್‌ನವರು ಕೊಡಿಸಿರುವ ಲೆಕ್ಕ ಎಲ್ಲಿ ಹೋಯಿತು? ನಮ್ಮ ಊರಿನ ಕಡೆ ಗ್ರಾಮಸೇವಕರು ಮತ್ತು ತಹಶೀಲ್ದಾರರು ಕೊಡಿಸಿದ್ದಾರೆ. ಅವರು ಕೊಡಿಸಿರುವ ಲೆಕ್ಕ ಎಲ್ಲಿ ಹೋಯಿತು? ಇವಕ್ಕೆಲ್ಲಾ

ಯಾವ ದಾಖಲೆ ಇದೆ. ಆದುದರಿಂದ, ಮಾನ್ಯ ಮಂತ್ರಿಗಳು ಇಂಥಾದಕ್ಕೆಲ್ಲಾ ಅವಕಾಶ ಕೊಡಬಾರದೆಂ. ಕೆಲವರು ಇದನ್ನು ತಮ್ಮ ರಾಜಕೀಯ ದ್ವೇಷವನ್ನು ಸಾಧಿಸುವುದಕ್ಕೆ ಸೂತ್ರವನ್ನಾಗಿ ಮತ್ತು ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ಕಾನೂನು ಪ್ರಕಾರ ಇದರ ಪರಿಹಾರ ಯಾರಿಗೆ ತಲುಪಬೇಕೋ ಅವರಿಗೆ ತಲಪಬೇಕೆಂಬುದೇ ನಮ್ಮ ಇರಾದೆ. ಆದುದರಿಂದ, ಈ ಕಾನೂನನ್ನು ಜಾರಿಗೆ ಕೊಡುವ ಕಾಲದಲ್ಲಿ ಅಧಿಕಾರ ವ್ಯಾಪ್ತಿಯಿಲ್ಲದವರೆಲ್ಲಾ ಇದರಲ್ಲಿ ಕೈಹಾಕಿ. ಅಲ್ಲಿ ದೋಷವನ್ನುಂಟು ಮಾಡುತ್ತಿದ್ದಾರೆ ಗ್ರಾಮಗಳಲ್ಲಿ ಅನಾವಶ್ಯಕವಾಗಿ ಇದರಿಂದ ಪರಸ್ಪರರಲ್ಲಿ ದ್ವೇಷಗಳು ಉಂಟಾಗುತ್ತಿವೆ. ಆದುದರಿಂದ ತಹಶೀಲ್ದಾರರೇ ಅರ್ಜಿ ಸ್ವೀಕಾರ ಮಾಡಿ ತೀರ್ಮಾನ ಮಾಡಬೇಕೆಂದು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಆದೇಶವನ್ನು ಕೊಡಬೇಕು. ಒಂದು ವೇಳೆ ಅರ್ಜಿಗಳು ಬಿ.ಡಿ ಒ ಅವರಿಗೆ ಹೋದರೆ, ಅವರು ಅದನ್ನು ಎಂಟರ್ ಟೇನ್ ಮಾಡದೆ, ಅದನ್ನು ತಹಶೀಲ್ದಾರರಿಗೆ ಕಳುಹಿಸುವಂತೆ ವಿರ್ಪಾಡು ಮಾಡಬೇಕು. ಅರ್ಜಿಸ್ವೀಕರಿಸಿದ ತಹಶೀಲ್ದಾರರು, ಬೇಕಾದರೆ, ಅರ್ಜಿ ಸಮೇತ ಸ್ಥಳಕ್ಕೆ ಧಾವಿಸಿ, ಅಲ್ಲೇ ವಿಚಾರಣೆ ಮಾಡಿ, ಅಲ್ಲೇ ತೀರ್ಮಾನ ಕೊಡುವ ವ್ಯವಸ್ಥೆ ಮಾಡಿದರೂ ನಮ್ಮ ಅಭ್ಯಂತರವಿಲ್ಲ. ಹೀಗೆ ಮಾಡುವಾಗ, ಕಾನೂನಿನ ವ್ಯಾಪ್ತಿಗೆ ಬರದ ಅಧಿಕಾರಿಗಳು ಅಥವಾ ಇನ್ಯಾರಾದರೂ ಹೋಗಿ, ಆ ಕಾನೂನಿನಲ್ಲಿರುವ ಅಧಿಕಾರವನ್ನು ಜಲಾಯಿಸಿದರೆ ಅವರಿಗೆ ಶಿಕ್ಷೆ ವಿಧಿಸುವ ಹಾಗೆ ಮಾಡಬೇಕು. ಹೀಗೆ ಮಾಡಿದ್ದಾದರೆ, ಶಿಕ್ಷೆ ವಿಧಿಸಬೇಕೆಂದು ಇಂಡಿಯನ್ ಪೀನಲ್ ಕೋಡ್‌ನಲ್ಲೂ ಇದೆ. ಆದುದರಿಂದ. ಇನ್ನು ಮೇಲೆ, ಗ್ರಾಮಸೇವಕರು, ಬಿ.ಡಿ.ಒ. ಮಂಂತಾದವರು ಇದರ ಬಗ್ಗೆ ಪ್ರಚಾರ ಮಾಡುವ ಕೆಲಸವನ್ನು ಬಿಟ್ಟು ಬಿಡಬೇಕೆಂದು ಒಂದು ಸ್ಪಷ್ಟ ನಿರ್ದೇಶನವನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಕೆ. ಎಚ್. ರಂಗನಾಥ್.—ಪ್ರಚಾರ ಮಾಡುವುದನ್ನು ಬಿಡಿಸುವುದಕ್ಕಾಗುವುದಿಲ್ಲ. ಬೇಕಾದರೆ ವಸೂಲಿ ಮಾಡುವುದನ್ನು ಬಿಡಿಸಬಹುದು. ನಾನು ಒಮ್ಮೆ ಗುಲ್ಬರ್ಗಕ್ಕೆ ಹೋಗಿದ್ದೆ ಅಲ್ಲಿ ಒಬ್ಬ ಎತ್ತಿನ ಕೊರಳಿನ ಗಂಟೆಯನ್ನು ತೆಗೆದುಕೊಂಡು ಹೋಗಿ ಅಡವಿಟ್ಟಿದ್ದಾನೆ ಹೊನ್ನಾಳಿ ತಾಲ್ಲೂಕಿನ ಒಬ್ಬ ಎಸ್.ಎಸ್ ಎಲ್.ಸಿ. ಓದಿದ ವಿದ್ಯಾರ್ಥಿಯಿಂದ, ಆತನ ಎಸ್ ಎಸ್.ಎಲ್.ಸಿ. ಸರ್ಟಿಫಿಕೇಟನ್ನು ಇಟ್ಟುಕೊಂಡು ಸಾಲ ಕೊಟ್ಟಿದ್ದಾರೆ. ಇಂಥಾ ಜನಗಳು ನಮ್ಮ ದೇಶದಲ್ಲಿರುವಾಗ, ನಾವು ಪ್ರಚಾರ ಮಾಡದೆ ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

I was really surprised Mr. Deputy Speaker to see with my own eyes a boy had pledged his SSLC Certificate. I do not know why that pawn br ker had accepted the certificate. Perhaps he wanted to make use of that certificate for his son who has not passed the examination. ಅಲ್ಲವೆ, ಬೇರೆ ಅಧಿಕಾರಿಗಳು ತಮ್ಮ ವ್ಯಾಪ್ತಿಗೆ ಮೀರಿದ ಕೆಲಸವನ್ನು ಮಾಡಿದ್ದು ಕಂಡುಬಂದರೆ, I would assure this House that the Government would not allow them to abuse those powers.

ಶ್ರೀ ಕಾಗೋಡು ತಿಮ್ಮಪ್ಪ.—ಆದ್ದರಿಂದ ನಾನು ಹೇಳುವುದು ಏನೆಂದರೆ, ತಾವು ಯಾರಿಗೆ ಈಗ ಅಧಿಕಾರವನ್ನು ಕೊಟ್ಟಿದ್ದೀರೋ ಅವರು ಪೂರ್ಣವಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ ಎಂದರೆ ಸಂಬಂಧಪಟ್ಟ ತಾಲ್ಲೂಕು ಮಟ್ಟದ ಬಿ.ಡಿ.ಒ ಗಳಿಗಾದರೂ ಈ ಅಧಿಕಾರವನ್ನು ಕೊಟ್ಟು ಕಾನೂನು ಪ್ರಕಾರ ಕೆಲಸ ಮಾಡಿಸಬೇಕು. Let there be no abuse of powers while executing this Act. ನನ್ನ ತಾಲ್ಲೂಕಿನಲ್ಲಿಯೂ ಕೂಡ ಈ ರೀತಿ ಪರಿಹಾರ ಕಾಯಿದೆಯ ಕೆಳಗೆ ಕೆಲಸ ಮಾಡಬೇಕೆಂದು ಗ್ರಾಮಸೇವಕರೂ ಮಂತ್ರಿ ವಿಲೇಜ್ ಅಕೌಂಟೆಂಟೂ ಪ್ರಾರಂಭ ಮಾಡಿದರು. ಹೆಗ್ಗೋಡು ಮಂಜ ಎನ್ನುವವನ ಕೈಯಿಂದ ಒಂದು ಅರ್ಜಿಯನ್ನು ಕೊಡಿಸಿ, ಅವನನ್ನು ಎತ್ತಿ ಕಟಿ ಕೊನೆಗೆ ಅವನನ್ನೇ ಬೆದರಿಸಿ ಅವನಿಗೆ ಏನು ಬರಬೇಕೋ ಅದನ್ನು ಅವರೇ ಲಪಟಾಯಿಸಿದ್ದು ನಮ್ಮ ಗಮನಕ್ಕೆ ಬಂದಿದೆ. ಇದೇ ರೀತಿ ಇನ್ನೊಬ್ಬ ಹೆಂಗಸಿನಿಂದ ಅರ್ಜಿಯನ್ನು ಕೊಡಿಸಿ ಸಾಲ ಕೊಟ್ಟವನನ್ನು ಒಳಗೆ ಹಾಕಿಕೊಂಡು ಜನರಿಗೆ ಮೋಸ ಮಾಡಿರುವುದು ನಮಗೆ ಗೊತ್ತಾಗಿದೆ, ಈ ರೀತಿ ವಿಲೇಜ್ ಅಕೌಂಟೆಂಟ್ ಮತ್ತು ಗ್ರಾಮಸೇವಕರು ಬೇಕಾದಷ್ಟು ಹಣವನ್ನು ಮಾಡಿಕೊಂಡಿದ್ದಾರೆ ಆದ್ದರಿಂದ ತಾವು ಇಂಥಾದಕ್ಕೆ ಅವಕಾಶವಾಗದ ರೀತಿಯಲ್ಲಿ ವ್ಯವಸ್ಥೆ ಮಾಡಿ ಇಂಥ ಅನಾಹುತಗಳನ್ನು ನಡೆಯುವುದಕ್ಕೆ ಪ್ರಯತ್ನ ಮಾಡಬೇಕು ಇದರಿಂದ ತಮ್ಮ ಉದ್ದೇಶ ಸಾಧನೆಯಾಗುತ್ತದೆ ಇದೆಲ್ಲಕ್ಕೂ ಮುಖ್ಯವಾಗಿ, ಹಳ್ಳಿಗಳಲ್ಲಿ ಕೋರ್ಟುಗಳನ್ನು ಕಂಡಕ್ಟ್ ಮಾಡುವಂತಾದರೆ ಬಹಳ ಒಳ್ಳೆಯದು. ಇಂಥ ಕೆಲಸಗಳನ್ನು

ಸರ್ಕಾರದವರು ಮಾಡಬೇಕೇ ಏನಹ ಬೇರೆಯವರೂ ಮಾತುತ್ತಾರೆಂದು ಕೂಡುವುದು ಒಳ್ಳೆಯದಲ್ಲ. ಕಾನೂನಿನಲ್ಲಿ ಅಸಿಸ್ಟೆಂಟ್ ಕಮಿಷನರ್ ನೇರವಾಗಿ ಎಲ್ಲಿಗಾದರೂ ಪ್ರವೇಶ ಮಾಡಬಹುದು, ಏನನ್ನಾದರೂ ಸೀಸ್ ಮಾಡಬಹುದು ಮತ್ತು ಎನ್‌ಕ್ವೈರಿ ಮಾಡಬಹುದು ಎಂದು ಇದೆ. ಇಷ್ಟೆಲ್ಲಾ ಅಧಿಕಾರ ಇವರಿಗೆ ಇದ್ದು ತಾವು ಬೇರೆಯವರಿಗೆ ಇದನ್ನು ಪಹಿಸಿದರೆ ಇದರ ಪ್ರಾಮುಖ್ಯತೆಯನ್ನೇ ಕಡೆಗಾಣಿಸತಕ್ಕ ಸ್ಥಿತಿ ಬರುತ್ತದೆ ಇಂಥ ಸ್ಥಿತಿಗೆ ಅವಕಾಶ ಕೊಡಬಾರದು ಎಂದು ಹೇಳಿ. ಅಧ್ಯಕ್ಷರು ನನಗೆ ಮಾತ ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಪಂಗಿಸುತ್ತೇನೆ.

SRI V. N. PATIL (Humnabad).—I welcome the Karnataka Debt Relief (Amendmen) Bill. It is quite timely. The Bill is meant to expedite work and give relief to the deserving as early as possible

While welcoming the provisions in the Bill to replace the ordinance, I would like to bring to notice of the Hon. Minister certain things. As my friend Mr Thimappa said their might be a few excesses, I cannot say there is no excess while fulfilling the duties by the Sub Divisional Magistrates or officers But such cases are negligible. There may be misuse in a few cases. But there are hundreds of officers who have failed in their duty with the fear of vested interests and the fear of their being pulled down by their superiors. In my own constituency I know there are cases where a debtor went to a sub-Magistrate and gave an application. His land was released and debt discharged. But harassment to that debtor started the next moment. In our area we have Police stations converted into panchayat centre, to help the money landers. They call the debtors in the presence of the creditors and threaten the poor to repay many of the creditors and say : "ಯಾರಪ್ಪನ ಗಂಟು ಮೂಣಗಸ್ತಿ, ಇದು ಬಹಳ ದಿನ ನಡೆಯುದಿಲ್ಲ" These are the words that our responsible officers use heroically before the smallest of the small, rural folk.

SRI K. H. RANGANATH.—He has not written a letter. I request the member to bring such instances to the notice of Government. This measure is not to see that officers make use of the n to amass wealth. It is meant to give relief to the public-the smallest person. I would appeal to the members and if they come across any instance of negligence on the part officers, to bring to our notice. Let them write to the Government. The Government is ready to take any action howsoever big that officer might be.

SRI V. N. PATIL.—Thank you. We have brought it to notice of the concerned Tahasildar and our Dist. Deputy Commissioner.

MR DEPUTY SPEAKER.—Has the hon. member copies of the correspondence ?

SRI V. N. PATIL.—Yes. I have confidence. I have brought this to his notice with full confidence that he will make the official machinery move. The Tahsildar has written letters to the police stations to help these poor people. He has stressed that debtor is not harassed by

the money lender. But in case if any Deputy Commissioner or executive magistrate writes to police station and say that debtor is not harassed, I do not think it is excess on the other hand I would say he has done his duty in a fearless and favourless manner. So to take for granted that excesses are committed by officers in implementing K.D.R. Act, against money lenders is not correct. It is not easy to implement the law with all sincerity at our disposal. I will give a concrete example. Under the Debt Relief Act our District Sub-Divisional Magistrate vested with the authority released a land. But the dragnet the moneylender puts in such a way that the sword shall be always hanging on the neck of the poor, while keeping the land in his possession the moneylender takes crop loans. I P. set loans and Gets arbitration award of the Co-operative Department and DCC Bank against the debtor only thing he sees to it that the sale decree is kept pending unexecuted as long as the debtor does not demand his land back under KDR Act. All the loans revised in the name of debtor are taken by the moneylender only to request forwards interest. Immediately after the release of the land by Sub-Divisional magistrate auction proceeding started one week the money lender saw to it that the debtor is forced to return the land. He manipulated in such a manner that sale officer of the District Co-operative Bank Bidar came to that land and notice for its auction sale. In the absence of alternate loan arrangement these are the anamolies. Most of the creditors take land for themselves and they do not allow lands to go to the hands of debtors. The moment a land is released they are somehow made to part with that. Every debtor is obliged to take some loan from some society or the other. The case in hand is that of one Karibasappa a poor pleasant whose land remained under moneylender for more than 12 years. Land released by sub-Divisional Magistrate Bidar. The maneylender are Shri Nagshetty Halli of the same village Meenakeri who is also an official of the DCC Bank Bidar cum a notorious moneylender of the same Meenakeri village having at least others poor peoples more than fifty acres in his custody in moneylenders transactions. Such things are there. Within one week of the release of the land by the Sub-Divisional Magistrate, the land was Proclaimed to be auctioned by the District Central Bank. The land happens to be in Meenakeri and the debtor is one Karibasappa. I am submitting to the Hon. Minister how the provisions of law are being defeated by the vested interests for their benefit, undettered and unmoved by the change of time a new epoch.

MR. DEPUTY SPEAKER.—The hon. Member is sincere in what he says but let him be within the scope of the Bill. He could have given a representation to the Minister on this matter.

SRI V. N. PATIL.—Thanking you Sir. I shall give a concrete example to show how sincere and honest officers are harassed. In our district we have a Sub-Divisional Magistrate who implemented the law *in toto* and in spirit. He has made it a mission of his life to see that the poor people are benefited. So, wherever he was going these vested interests followed him to slander and they used to call him 'Gabbar Singh' and all sorts of pressures were brought by his superiors and so continued. Even remarks to suggest that he is neglecting his routine work, So he felt, what was the use of his taking so much risk and devoting his energy and enthusiasm to help the poor at the risk of his health facing such criticism, and hence all his spirit was watered down. Such officers must be encouraged and not penalised by uncharitable remarks even by us in this house. A word of encouragement to them will go a long way towards the proper implementation of the law. That is what we are lacking.

With these words I thank the Hon. Minister for having brought this Bill to replace the ordinance and I also thank the Chair for having given me this opportunity to participate in the debate.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಉಪಾಧ್ಯಕ್ಷರೇ, ಈ ದಿವಸ ಮಾನ್ಯ ಸಹಕಾರ ಸಚಿವರು ಕರ್ನಾಟಕ ಡೆಟ್ ರಿಲೀಫ್ ಆಕ್ಟ್‌ಗೆ ತಂದಿರತಕ್ಕಂಥಾ ತಿದ್ದುಪಡಿಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮಾನ್ಯ ಮಂತ್ರಿಗಳು ಮಾಡಿರತಕ್ಕಂಥಾ ಒಳ್ಳೆಯ ಕೆಲಸಗಳಲ್ಲಿ ಇದೂ ಕೂಡ ಒಂದಾಗಿದೆ. ಇಂದು ಈ ಬಂಡವಾಳಶಾಹೀ ಸಮಾಜದಲ್ಲಿ ಬಡವರಿಗೆ ಸಾಲವನ್ನು ಹೇರಿ ಅವರ ಸಾಲವನ್ನು ವಸೂಲ್ಮಾಡುವುದರ ಜೊತೆಗೆ ಅವರ ರಕ್ತವನ್ನೂ ಕೂಡ ಹೀರತಕ್ಕಂಥಾ ಅನೇಕಾನೇಕ ನಿದರ್ಶನಗಳು ಇವೆ ಅವರಿಗೆ ಇದು ಒಂದು ಪಾಶವೀಕೃತ್ಯವಾಗಿ ಪರಿಣಮಿಸಿತ್ತು. ಈಗ ಅವರು ಈ ಪಾಶವೀಕೃತ್ಯದಿಂದ ಮುಕ್ತರಾಗುವ ಕಾಲ ಬಂದಿದೆ. ಬಹಳ ಸಂತೋಷ ಇದು ಅಧಿಕಾರೀ ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟಿರತಕ್ಕಂಥಾದ್ದನ್ನೂ ಕೂಡ ಸ್ವಾಗತ ಮಾಡುತ್ತೇನೆ. ಈ ಹಿಂದೆ ಮಾತನಾಡಿದಂಥಾ ಕೆಲವು ಸದಸ್ಯರು ಈ ಬಗ್ಗೆ ಕೆಲವು ಕಡೆ ಇದ್ದಂಥಾ ಆಚಾತುರ್ಯ ಮತ್ತು ಅನ್ಯಾಯಗಳನ್ನೂ ಕೂಡ ಈ ಸಭೆಯ ಗಮನಕ್ಕೆ ತಂದಿದ್ದಾರೆ. ಹೌದು, ಇದರ ಕೆಲವು ಕಡೆ ರಾಜಕೀಯ ಕಾರಣಗಳಿಂದ ಮತ್ತು ಜೀಪ್ ಪಾಪ್ಯುಲಾರಿಟಿ ದೃಷ್ಟಿಯಿಂದ ನೇಮಕವಾಗಿರತಕ್ಕಂಥಾವರು ಇಂಥಾದ್ದನ್ನು ಮಾಡಿದಾರೆ.

MR. DEPUTY SPEAKER.—I would request the Hon. Member to confine himself to the scope of this Bill.

ಶ್ರೀ ಸಿ. ಬೈರೇಗೌಡ.- ಇದರಲ್ಲಿ ಸಬ್‌ಡಿವಿಷನಲ್ ಮ್ಯಾಜಿಸ್ಟ್ರೇಟ್ ಅನ್ನುವ ಪದಕ್ಕೆ ಬದಲಾಗಿ ಎಕ್ಸಿಕ್ಯೂಟೀವ್ ಮ್ಯಾಜಿಸ್ಟ್ರೇಟ್ ಅಂತ ಇದೆ ಮೊದಲು ಸಬ್ ಡಿವಿಷನ್ ಮ್ಯಾಜಿಸ್ಟ್ರೇಟ್‌ನಲ್ಲಿದ್ದಾಗ ಏನೇನು ನಡೆದಿದೆ ಅನ್ನುವುದನ್ನು ನಾನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಆಕ್ಟ್‌ಗೆ ತಂದಿರತಕ್ಕಂಥಾ ತಿದ್ದುಪಡಿ ಎಷ್ಟುಮಟ್ಟಿಗೆ ಯೋಗ್ಯವಾಗಿದೆ ಅನ್ನು ನಾನು ಒತ್ತಾಯವಾಗಿ ಹೇಳಬೇಕಾಗಿದೆ ಆ ಬಗ್ಗೆ ಕಾರಣವನ್ನೂ ಕೂಡ ಕೊಟ್ಟು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ಕಡೆ ರಾಜಕೀಯ ಕಾರಣಗಳಿಂದ ಈ ಒಂದು ಕಾನೂನನ್ನು ದುರುಪಯೋಗ ಮಾಡಿಕೊಂಡಿರತಕ್ಕಂಥಾದ್ದು ಅಥವಾ ಈವೊತ್ತು ಅಧಿಕಾರದ ಗದ್ದುಗೆಯಲ್ಲಿರತಕ್ಕಂಥಾವರು ಹೊರಗಡೆ ಏನೇನು ನಡೆಸುತ್ತಿದ್ದಾರೆ ಅನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ತಾವು ಈಗ ೨೦ ಅಂಶಗಳ ಕಾರ್ಯಕ್ರಮವನ್ನು ದೇಶದಲ್ಲಿ ಜಾರಿಗೆ ತರುವುದಕ್ಕೆ ಜಿಲ್ಲೆಗೆ ಒಬ್ಬೊಬ್ಬ ಮಂತ್ರಿಗಳನ್ನು ನೇಮಿಸಿರುವುದಾಗಿದೆ. ಒಂದು ಕಡೆ ಏನಾಗಿದೆ ಎಂದರೆ ಸ್ಮಾಲ್ ಫಾರ್ಮರ್ಸ್ ಡೆವಲಪ್‌ಮೆಂಟ್ ಏಜೆನ್ಸಿ ಮೂಲಕ ಕೊಡಿ ಅಂತ ಹೇಳಿ ಅದಕ್ಕೆ ಮಂತ್ರಿಗಳು ಚೆಕ್ ಕೊಡುವುದು. ಆದರ ಪಕ್ಕದಲ್ಲೇ ಈ ಮಂತ್ರಿಗಳಿಗೆ ಬೇಕಾದಿರತಕ್ಕಂಥಾವರು, ಅಣ್ಣತಮ್ಮಂದಿರಾಗಿರತಕ್ಕಂಥಾವರು ಅಥವಾ ಹತ್ತಿರದ ಸಂಬಂಧಿಗಳಾಗಿರತಕ್ಕಂಥಾವರು ಮನಿಲೆಂಡರ್ಸ್, ಬಿಸಿನೆಸ್ ಇಟ್ಟು

ಕೂಡಿದ್ದರು. ಅವರಿಗೆ ಮನಿಲೆಂಡರ್ ಲೈಸನ್ಸ್ ಇರುವುದೇ ಅನುಮಾನ ಎಂದು ನನಗೆ ಶಂಕೆ ಇದೆ. ಒಂದು ಕಡೆ ಈ ರೀತಿ ಚೆಕ್ ಕೊಡುವುದು ಮತ್ತೊಂದು ಕಡೆ ಆ ಚೆಕ್ ಅನ್ನು ಅವರ ಹೆಸರಿಗೆ ಎಡಾರ್ಸ್ ಮಾಡಿರುವ ಅನೇಕ ನಿದರ್ಶನಗಳೂ ಕೂಡ ಇವೆ. ಹೀಗಾದರೆ ಏನು ಮಾಡುವುದು? ಈ ಬಗ್ಗೆ ಸಾಕ್ಷಿ, ಆಧಾರ ಪುರಾವೆಗಳನ್ನು ಇಟ್ಟುಕೊಂಡು ಹೇಳಿದರೂ ಕೂಡ ಇದನ್ನು ಉದ್ದೇಶದಿಂದ ಹೇಳುತ್ತೀರಿ ಅಂತ ಹೇಳುತ್ತಾರೆ. ನಾನು ಮಾನ್ಯ ಸಹಕಾರ ಸಚಿವರನ್ನು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ತಾವು ಒಂದು ವಿಚಾರಣಾ ಸಮಿತಿಯನ್ನು ನೇಮಿಸಿ. ನಾನು ತಮಗೆ ಬೇಕಾದರೆ ಎಲ್ಲಿ ಏನು ನಡೆಯಿದೆ ಅನ್ನುವುದನ್ನು ಹೇಳುತ್ತೇನೆ

ಶ್ರೀ ಕೆ ಎಚ್ ರಂಗನಾಥ್. ಮಾನ್ಯರು ಅವರು ಹೇಳುವುದಕ್ಕೆ ಏನು ಪುರಾವೆ ಇಲ್ಲ. ಅವರು ಏನು ಹೇಳುತ್ತಿದ್ದಾರೆ ಎಂದರೆ ಒಂದು ಕಡೆ ಮಂತ್ರಿಗಳು ಹೋದರು, ಚೆಕ್ ಕೊಟ್ಟರು, ಇನ್ನೊಬ್ಬರು ಅದನ್ನು ತೆಗೆದುಕೊಂಡರು ಅಂದರೆ ಇದು ಏನು ? ಹಾಗೆ ಹೀಗೆ ಅಂತ ಹೇಳಿದರೆ ಇದು ಹೇಗೆ ಆಧಾರ ಸ್ವಾಮಿ? ಮೊದಲೇ ಅಧ್ಯಕ್ಷರು ಹೇಳಿದರು ಈ ಬಿಲ್‌ನಲ್ಲಿರುವ ಸ್ಕೋಪ್‌ನ ಒಳಗೆ ಮಾತನಾಡಬೆಕು ಎಂದು. ಮಾನ್ಯ ಸದಸ್ಯರು ಹೊರಗಡೆ ಏನಾದರೂ ಇಂತಹ ವಿಷಯ ಹೇಳಿದರೆ ಕಂಟೆಪ್ಟ್ ಆಗಬಹುದು ಈ ಸಭೆಯಲ್ಲಿ ಹೇಳಿದರೆ ಅವೇನೂ ಕಂಟಿಪ್ಟ್ ಆಗುವುದಿಲ್ಲ ಮಾನ್ಯ ಸದಸ್ಯರು ಏನೂ ಪುರಾವೆ ಇಲ್ಲದೆ ಈ ರೀತಿಯಾಗಿ ಸುಮ್ಮನೆ ಹೇಳಿಕೊಂಡು ಹೋಗುತ್ತಾ ಇದ್ದರೆ ಏನು ಅಂತ ನಾವು ತಿಳಿಯಬೇಕು ಕೊಟ್ಟವರ ಹೆಸರು ಹೇಳಬೇಕು ತೆಗೆದುಕೊಂಡವರ ಹೆಸರು ಹೇಳಬೇಕಲ್ಲ ಅವರು ಈ ತಕ್ಷಣ ಏನೂ ಹೇಳಬೇಕಾದ್ದಿಲ್ಲ. ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಬರೆದು ಕೊಡಬಹುದು. ಆವಾಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ ಅದು ತಪ್ಪಾಗುತ್ತದೆ ಅವರು ತಮ್ಮ ಭಾಷಣವನ್ನು ಬನಪ್ಪಪಾರ್ಕ್‌ನಲ್ಲಿ ಮಾಡುವ ಹಾಗೆ ಮಾಡಿದರೆ ಏನು ಮಾಡಬೇಕು ?

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ ನಾನೇನೂ ಬನಪ್ಪಾ ಪಾರ್ಕಿನಲ್ಲಿ ನಿಂತಿಲ್ಲ. ದಯವಿಟ್ಟು ಕ್ಷಮಿಸಬೇಕು.

SRI K. H. RANGANATH.—Let it be within the scope of the Bill

MR DEPUTY SPEAKER.—He can bring honour to himself and greater honour to the House by substantiating his statements.

ಶ್ರೀ ಸಿ ಬೈರೇಗೌಡ.—ಆ ತರಹ ಮಾಡುವುದಕ್ಕೆ ನಾನು ತಯಾರಾಗಿದ್ದೇನೆ ನಾನು ಇದರ ಬಗ್ಗೆ ಕಾಂಕ್ರೀಟ್ ಆಗಿ, ಸಬ್‌ಸ್ಟಾನ್ಷಿಯಲ್ ಆಗಿ ಇಡುವುದಕ್ಕೆ ತಯಾರಾಗಿದ್ದೇನೆ.

SRI K. H. RANGANATH.—Nobody can prevent him from saying what he wants to in this House.

MR. DEPUTY SPEAKER.—He has some privileges also. Why does he not avail of them ?

SRI K. H. RANGANATH.—This House is so supreme that if he has evidence to prove them he can produce them here.

ಶ್ರೀ ಸಿ. ಬೈರೇಗೌಡ.—ಅದಕ್ಕೆ ಸಮಯವಿದೆ, ಅದನ್ನು ಖಂಡಿತ ಮಾಡುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ಈ ಮನೆಯ ರೂಲ್ಸ್ ಪ್ರಕಾರ ಅದನ್ನು ಹೇಳುವುದಕ್ಕೆ ಮೊದಲು ಅದರ ಒಂದು ಕಾಪಿಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಮತ್ತು ಒಂದು ಕಾಪಿಯನ್ನು ಮಾನ್ಯ ಅಧ್ಯಕ್ಷರಿಗೆ ಕೊಡಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ —ನನ್ನ ಮಾನ್ಯ ಸ್ನೇಹಿತರು ಸಂಬಂಧಪಟ್ಟ ಮಂತ್ರಿಗಳ ಹೆಸರನ್ನು ಹೇಳುವುದಕ್ಕೆ ಧೈರ್ಯ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ಬೈರೇಗೌಡ —ಸಮಯ ಬಂದಾಗ ಅದನ್ನು ಹೇಳುವುದಕ್ಕೆ ನಾನು ತಯಾರಿದ್ದೇನೆ.

4-00 ಪಿ. ಎಂ.

ಉಪಾಧ್ಯಕ್ಷರು.—ಇದೇ ಸಮಯಂ, ತಮಗೆ ಹೇಳುವುದಕ್ಕೆ ;

ಶ್ರೀ ಸಿ. ಬೈರೇಗೌಡ.—ಅದಕ್ಕೆ ಸಮಯವಿದೆ. ಆದರೆ.....

ಶ್ರೀ ಕೆ ಎಚ್ ರಂಗನಾಥ್ —ಸಮಯ ಬಂದಾಗ ಹೇಳುತ್ತೇನೆಂದರೆ ಹೇಗೆ ? We are prepared to face that. I request the Hon'ble member not to make any allegations without any base Let him follow the Parliamentary Procedure ಅಂಥದ್ದು ಏನಾದರೂ ಇದ್ದರೆ ಹೇಳಿ ಇಂದೇ ಹೇಳುವುದಕ್ಕೆ ತೊಂದರೆ ಏನು ? ದೇವರೇನಾದರೂ ಎಡಗಡೆ ಅಥವಾ ಬಲಗಡೆ ಹೂ ಕೊಟ್ಟಿದ್ದಾನೇನು ?

ಶ್ರೀ ಸಿ ಬೈರೇಗೌಡ.—ಪಬ್ಲಿಗ್ ಅಕೌಂಟ್ಸ್ ಕಮಿಟಿಯ ವರದಿ ಇದೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

MR. DEPUTY SPEAKER — Is it within the scope please Do not go outside the scope of the Bill

ಶ್ರೀ ಸಿ. ಬೈರೇಗೌಡ — ಈಗ ಅಧಿಕಾರವನ್ನು ವಿಕೇಂದ್ರೀಕರಣ ಮಾಡುವುದಕ್ಕೆ ಹೊರಟಿದ್ದಾರೆ, ಇಂತಹ ಸಂದರ್ಭದಲ್ಲಿ ಮಂತ್ರಿಮಂಡಲದಲ್ಲಿರುವವರೇ ಈ ರೀತಿ ಮಾಡಿದರೆ ಅವರಿಗೆ ಶಿಕ್ಷೆ ವಿಧಿಸುವುದಕ್ಕೆ ಯಾವ ಕಾನೂನು ಇದೆ ?

SRI K. H. RANGANATH — I am really sorry for the Hon'ble Member as a Member of this House we enjoy certain privileges. There is no point in saying 'Ministers are mis-using the power'. ಮಂತ್ರಿಗಳು ಅಧಿಕಾರ ದುರುಪಯೋಗ ಮಾಡುತ್ತಿದ್ದಾರೆಂದರೆ, If he has got any information with him even now let him pass on that information to me. which Minister has done and when-that would have been all right Otherwise it would be only "playing to the gallery," it would be nothing more than that.

SRI C. BYRE GOWDA.—I don't say all Ministers.

ಉಪಾಧ್ಯಕ್ಷರು.—ತಿದ್ದುಪಡಿಯ ಮೇಲೆ ಮಾತ್ರ ಮಾತನಾಡಿ ಎಂದು ನಾನು ತಮಗೆ ಅನೇಕ ಸಲ ಹೇಳುತ್ತೇನೆ.

ಶ್ರೀ ಸಿ. ಬೈರೇಗೌಡ — ಮಾನ್ಯ ಮಂತ್ರಿಗಳು ಹೇಳುವ ರೀತಿಯಾಗಿ ಕೆಲಸ ಮಾಡುವುದಕ್ಕೆ ನಾನು ಇಲ್ಲಿಗೆ ಬಂದಿಲ್ಲ

MR DEPUTY SPEAKER.—There are certain procedures to be followed. I told him to make some candid charges.

K. H. RANGANATH —I request the Hon'ble Member and tell him that this is the sovereign body and certain privileges are given to us. Our deliberations should be very dignified. If he has got specific instances I request him to pass on that information, otherwise there is no use of passing on remarks on all the Ministers.

SRI C. BYRE GOWDA.— I did not say all Ministers.

ಶ್ರೀ ಕೆ. ಎಚ್. ರಂಗನಾಥ್.—ಮಂತ್ರಿಗಳು ಎಂದರೆ ಏನು ? ನಾನಾಗಬಹುದು ಮಾನ್ಯ ಪಾಟೀಲರಾಗಬಹುದು ಇಲ್ಲವೇ ಮಾನ್ಯ ಹುಚ್ಚಮಾಸ್ತಿಗೌಡರಾಗಬಹುದು ;

ಶ್ರೀ ಸಿ. ಬೈರೇಗೌಡ.—ಮಂತ್ರಿಮಂಡಲದಲ್ಲಿರುವವರು ಎಂದರೆ ಎಲ್ಲರೂ ಹೇಗೆ ಆಗುತ್ತಾರೆ ?

ಉಪಾಧ್ಯಕ್ಷರು.—ತಾವು ಈಗ ತಿದ್ದುಪಡಿಯ ಮೇಲೆ ಮಾತನಾಡಿ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ಈ ಮನೆಯ ರೂಲ್ಸ್ ಪ್ರಕಾರ ಏನಾದರೂ ಹೇಳುವುದಿದ್ದರೆ ನೋಟೀಸ್ ಕೊಟ್ಟು ಹೇಳಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸದನದಲ್ಲಿರಿವವರ ಬಗ್ಗೆ ಹೇಳುವುದಿದ್ದರೆ ನೋಟೀಸ್ ಕೊಡಬೇಕಾಗಿಲ್ಲ.

SRI K. H. RANGANATH.—No there is such procedure.

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳು ಹೇಳಿದಂತೆ ನಾನು ಎಲ್ಲ ಮಂತ್ರಿಗಳ ಮೇಲೂ ಹೇಳಲಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಅವರ ಜಿಲ್ಲೆಯಲ್ಲಿ ನನ್ನ ಸಂಬಂಧೀಕರು ಯಾರೂ ಇಲ್ಲ ಅವರ ಜಿಲ್ಲೆಗೆ ನಾನು ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರತಕ್ಕಂಥ ಮಂತ್ರಿಯಾಗಿಲ್ಲ ಮತ್ತು ನಾನು ಅವರ ಜಿಲ್ಲೆಗೆ ಹೋಗಿಲ್ಲ. When charges are made it should be specific and supported by facts and figures.

ಶ್ರೀ ಸಿ. ಬೈರೇಗೌಡ.—ನಾನು ಹೇಳದೇ ಇರುವುದನ್ನು ಮಾನ್ಯ ಮಂತ್ರಿಗಳು ಹೇಳುತ್ತಾರೆ ಅದಕ್ಕೆ ನಾನು ಜವಾಬ್ದಾರನಲ್ಲ. ನಾನು ಎಲ್ಲರ ಮೇಲೂ ಹೇಳುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಅಧಿಕಾರದ ದುರುಪಯೋಗ ಮೇಲ್ಮಟ್ಟದಲ್ಲಿ ನಡೆಯುತ್ತಿದೆ ಎಂದು ಇದನ್ನು ತಡೆಗಟ್ಟುವುದಕ್ಕೆ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಂಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಅವಶ್ಯಕತೆಗಿಂತ ಹೆಚ್ಚಾಗಿ ಮಾತನಾಡಿದ್ದಾಗಿದೆ ಬಿಲ್‌ನ ಚೌಕಟ್ಟಿನೊಳಗೇ ಮಾತನಾಡತಕ್ಕಂಥ ಪದ್ಧತಿಯನ್ನು ಮಾನ್ಯ ಸದಸ್ಯರು ಅನುಸರಿಸಬೇಕು ಮತ್ತು ಆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕೆಂದು ತಾವು ಮಾನ್ಯ ಸದಸ್ಯರಿಗೆ ಹೇಳುತ್ತಿರುವುದನ್ನು ನಾನು ಒಪ್ಪುತ್ತೇನೆ ಈಗ ಬತವರಿಗೆ ಹಾಗೂ ಕಷ್ಟದಲ್ಲಿರುವವರಿಗೆ ಕಾಲದ ಹೊರಯಿಂದ ಆದಷ್ಟೂ ಕೂಡ ವಿನಾಯಿತಿ ಕೊಡಬೇಕೆಂಬ ಸದುದ್ದೇಶದಿಂದ ಈ ತಿದ್ದುಪಡಿ ಮಸೂದೆಯನ್ನು ಮಾನ್ಯ ಮಂತ್ರಿಗಳು ತೆಗೆದುಕೊಂಡ ಬಂದಿದ್ದಾರೆ. ಡೆಟ್ ರಿಲೀಫ್ ಆಕ್ಟ್‌ನಲ್ಲಿ ಏನೂ ಕೆಲವು ಅಂಶಗಳಿದ್ದವು ಅವುಗಳನ್ನು ತ್ವರಿತವಾಗಿ ಜಾರಿಗೆ ಕೊಡಬೇಕು ಪ್ರಗತಿಪರವಾಗಿ ಕೆಲಸಗಳಾಗಬೇಕೆಂಬ ದೃಷ್ಟಿಯಿಂದ, ಅದಕ್ಕೆ ಕೆಲವು ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಿದ್ದಾರೆ, ಇಲ್ಲಿಯವರೆಗೆ ಸಬ್-ಡಿವಿಜನಲ್ ಮ್ಯಾಜಿಸ್ಟ್ರೇಟ್ ಅವರಿಗೆ ಅಧಿಕಾರ ಕೊಡಲಾಗಿತ್ತು. ಇನ್ನು ಮುಂದೆ ಅವರ ಜೊತೆಗೆ ಏಸ್ಸಿಕ್ಯುಟಿವ್ ಮ್ಯಾಜಿಸ್ಟ್ರೇಟ್ ಅವರಿಗೂ ಕೂಡ ಇಂತಹ ಕೇಸ್‌ಗಳನ್ನು ತೆಗೆದುಕೊಂಡು ತೀರ್ಮಾನ ಮಾಡಬಹುದೆಂದೂ ಇಲ್ಲಿ ತಿದ್ದುಪಡಿ ತೆಗೆದುಕೊಂಡು ಬಂದಿದ್ದಾರೆ.

ಆ ಮೇಲೆ ಇದರಲ್ಲಿ "4. Transfer of Pending Proceedings : where an executive Magistrate is authorised by the State Government under clauses (e) and (f) of Section 4 or under sub-section 5, every application made to and every statement filed before the Sub Divisional Magistrate and Proceeding connected therewith pending before him on the date of commencement of this Act shall stand transferred to such Executive Magistrate and be disposed of by him as if it had been made or filed before him" ಎಂದು ಹೇಳಿದ್ದಾರೆ ಪೆಂಡಿಂಗ್ ಬಿದ್ದಿರತಕ್ಕದನ್ನು ಜಾಗ್ರತೆಯಾಗಿ ಬಗೆಹರಿಸಬೇಕು ಎನ್ನುವ ಉದ್ದೇಶದಿಂದ ಇದನ್ನು ತೆಗೆದುಕೊಂಡಿದ್ದಾರೆ ಇದರಲ್ಲಿ ಹೆಚ್ಚಿಗೆ ಮಾತನಾಡಬೇಕಾದ ಅವಶ್ಯಕತೆ ಇಲ್ಲ. ಶ್ರೀ ಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಇದರಲ್ಲಿ ಮಾನ್ಯ ಮಂತ್ರಿಗಳು ಇದರಲ್ಲಿ ಏಷ್ಟು ಜನಗಳಿಗೆ ಅನುಕೂಲವಾಗುತ್ತದೆ. ಏಷ್ಟರಮಟ್ಟಿಗೆ ಪ್ರಗತಿಯನ್ನು ಸಾಧಿಸಿದ್ದಾರೆ ಎಂಬುದನ್ನು ಹೇಳಿದ್ದಾರೆ. ಈ ಕಾನೂನನ್ನು ಕೆಲವರು ದುರುಪಯೋಗ ಮಾಡಿಕೊಂಡಿದ್ದಾರೆ. ಒಂದಂ ವಿಚಾರವನ್ನು ಹೇಳಬೇಕಾದರೆ ಸಣ್ಣ ಪೋಲೀಸ್ ಅಧಿಕಾರಿಗಳು ಕೂಡ ಅನೇಕ ಮನಿಲೆಂಡರ್ ಹತ್ತಿರ ಹೋಗಿ ಅವರನ್ನು ಹೆದರಿಸಿ ಅವರಿಂದ ಹಚ್ಚಿನ ಲಾಭವನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಿ

ದ್ದಾರೆ. ಆದ್ದರಿಂದ ಲಾ ಪ್ರಕಾರ ಇದನ್ನು ಕಾಯಿದೆಗೆ ಅನುಗುಣವಾಗಿ ಅನ್ವಯಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದನ್ನು ಒಬ್ಬೊಬ್ಬರು ಸ್ವಂತಕ್ಕೋಸ್ಕರ ಉಪಯೋಗ ಮಾಡಿಕೊಳ್ಳುವುದನ್ನು ತಡೆಗಟ್ಟಬೇಕು ಎಂದು ನಾನು ಮತ್ತೊಮ್ಮೆ ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ ಈಯೂತ್ ಕಾಂಗ್ರೆಸ್ಸಿನವರ ಹಾವಳಿ ಬಹಳ ಜಾಸ್ತಿಯಾಗಿದೆ. ಇವರು ನ್ಯಾಷನಲೈಜ್ಡ್ ಬ್ಯಾಂಕಿಗೆ ಕೂಡ ಹೋಗಿದ್ದಾರೆ. ಬಸವನಗುಡಿ ಬ್ರಾಂಚ್ ಕೆನರ್ ಬ್ಯಾಂಕಿಗೆ ಯೂತ್ ಕಾಂಗ್ರೆಸ್‌ನವರು ಹೋಗಿ ಅಲ್ಲಿ ಹಣವನ್ನು ತೆಗೆದುಕೊಳ್ಳುವ ಬಗ್ಗೆ ಗಲಾಟೆ ಮಾಡಿದ್ದಾರೆ. ಈ ಕೆನರಾ ಬ್ಯಾಂಕಿಗೆ ಒಬ್ಬರು ಯೂತ್ ಕಾಂಗ್ರೆಸ್ಸಿನವರು ಹೋಗಿ ನಾನು ಯೂತ್ ಕಾಂಗ್ರೆಸ್ ಆಸೋಷಿಯೇಷನ್ ಪ್ರೆಸಿಡೆಂಟರು ನಾನು ಚೆಕ್ ಡ್ರಾ ಮಾಡಬೇಕು ಎಂದು ಹೇಳಿದಾಗ ಆ ಬ್ಯಾಂಕಿನ ಮ್ಯಾನೇಜರ್ ಅವರು ಅವರನ್ನು ಕುರಿತು ಹಣವನ್ನು ಡ್ರಾ ಮಾಡಬೇಕಾದರೆ ತಾವು ಪ್ರೆಸಿಡೆಂಟರಾಗಿ ಚುನಾಯಿತರಾಗಿರುವುದು ರೆಸುಲ್ಯೂಷನ್ ಏನಾಗಿದೆ ಅದು ಬೇಕು ಎಂದು ಹೇಳಿದಾಗ ಅವರು ಆ ಮ್ಯಾನೇಜರ್ ಮೇಲೆ ಯದ್ವಾತದ್ವ ರೇಗಿ ನಿಮ್ಮನ್ನು ಇಲ್ಲಿಂದ ಓಡಿಸುತ್ತೇನೆ, ನೀವು ಜನಸಂಘದವರಿಗೆ ಮಾತ್ರ ಸಹಾಯ ಮಾಡುತ್ತೀರಿ, ನಮಗೆ ಕಾಂಗ್ರೆಸ್ಸಿನವರಿಗೆ ತೊಂದರೆ ಮಾಡುತ್ತೀರಿ ನಿಮಗೆ ಏನು ಮಾಡಬೇಕೋ ಅದನ್ನು ಮಾಡುತ್ತೇನೆ, ನಿಮ್ಮನ್ನು ಇಲ್ಲಿಂದ ಮೂರು ದಿನಗಳಲ್ಲಿ ಎಬ್ಬಿಸುತ್ತೇನೆ ಎಂದು ಅವರಿಗೆ ಬೆದರಿಕೆ ಹಾಕಿದ್ದಾರೆ. ಬೆಂಗಳೂರು ಬಸವನಗುಡಿ ಬ್ರಾಂಚ್ ಕೆನರಾ ಬ್ಯಾಂಕ್‌ನಲ್ಲಿ ಒಂದು ಘಟನೆ ನಡೆದಿದೆ. ನ್ಯಾಷನಲೈಸ್ಡ್ ಬ್ಯಾಂಕ್ ಇವರ ಮೇಲೆ ಯೂತ್ ಕಾಂಗ್ರೆಸ್ಸಿನವರು ಇಷ್ಟೊಂದು ಪ್ರಭಾವ ಬೀರುವಾಗ ಬೇರೆಯವರ ಮೇಲೆ ಎಷ್ಟು ಪ್ರಭಾವ ಬೀರಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ಸಣ್ಣ ಪೋಲಿಸಿನವರು ಮತ್ತು ಯೂತ್ ಕಾಂಗ್ರೆಸ್ ಮಿತ್ರರು ಆ ರೀತಿ ಮಾಡದ ಹಾಗೆ ಕ್ರಮ ತೆಗೆದುಕೊಳ್ಳಬೇಕು ಮತ್ತು ಇದನ್ನು ಕ್ಯಾಬಿನೆಟ್‌ನಲ್ಲಿ ಡಿಸ್‌ಕಸ್ ಮಾಡಬೇಕು ಯೂತ್ ಕಾಂಗ್ರೆಸ್ಸಿನವರ ಹಾವಳಿಯನ್ನು ತಪ್ಪಿಸಬೇಕು. ಮುನಿಲಿಂಡರ್ ಹಾವಳಿಯಲ್ಲಿ ಇವರ ಹಾವಳಿಯೂ ಸೇರಿಕೊಂಡರೆ ಬಹಳ ಕಷ್ಟವಾಗುತ್ತದೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†SRI B.B. SAYANAK (Belgaum).—Mr. Deputy Speaker, Sir, I rise to support this bill because this bill is beneficial to the weaker sections of the Society. I have read in the newspapers that in Utter Pradesh, poor people are pledging their sons to the rich persons. They are pledging their daughters also in some cases. What I am telling is true. I want to impress upon the Government to take action not only on people who are on the opposition side but also on some influential persons belonging to Congress who are all involved. Some people are taking advantage of the party. Our Prime Minister, Smt. Indira Gandhi has said that we are not going to tolerate any person, whether he is a Congress man or Opposition, to do injustice to the weaker sections of the Society. If the Government is going to take action against all those persons irrespective of the party which they belong, we are satisfied but this is not the case. In my taluka, the Sub-Divisional Magistrate belongs to one community and another rich man, who belongs to Congress party, is taking advantage of his inffluence and party and is not giving a land to the poor people. Unless this is stopped, weaker sections of the society will not get justice.

The Government has given powers to the Taluka Magistrates. Our Hon'ble Minister tour different parts of the State almost 20-25 days in a month. The Taluka Magistrate, i. e., the Tahsildar is fully engaged with the tour programmes of different Hon'ble Ministers. If that is the

case, how can he do full justice to these weaker section of the society? Therefore, I request the Government to appoint Special Tashildars for some time like Special Deputy Commissioners. If the Government appoint Special Tahsildars at least for one or two years, then, it is possible to give justice to the weaker sections of the society.

With these words, I thank the Chair and conclude my speech.

†ಶ್ರೀ ಕೋಣಂದೂರುಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸಹಕಾರ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಕರ್ನಾಟಕ ಡೆಟ್ಬರಿಲೀಫ್ ಬಿಲ್ಲನ್ನೂ ತಾತ್ವಿಕವಾಗಿ ಸ್ವಾಗತಿಸಿ ಎರಡು ಮಾತನ್ನು ಹೇಳುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ ಹಿಂದೆ ಮಾತನಾಡಿದಂತಹ ನಮ್ಮ ಸ್ನೇಹಿತರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಈ ಕಾನೂನಿಗೆ ಸಂಬಂಧಪಟ್ಟ ಸುಗ್ರೀವಾಜ್ಞೆ ಹೊರಬಿದ್ದ ಕೂಡಲೇ ರಾಜ್ಯದ ಪಾಲಿಗೆಲ್ಲರೂ ಎದ್ದರು ಆದರೆ ನಿಜವಾಗಿ ತುಳಿಯಲ್ಪಟ ಜನಗಳಿಗೆ ಇದರಿಂದ ಪ್ರಯೋಜನ ವಾಗುತ್ತದೆ. ಆದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ ಇವೊತ್ತು ವಾಸ್ತವವಾಗಿ ಸುಗ್ರೀವಾಜ್ಞೆಯನ್ನು ಜಾರಿಗೆ ತಂದ ನಂತರ ಆದಂತಹ ಕೆಲಸಕಾರ್ಯಗಳು ಏನು ಆದರ ಪ್ರಚಾರ ಮತ್ತು ಆಚಾರವನ್ನು ಆನು ಪ್ಲಾನಕ್ಕೆ ತರುವುದಕ್ಕೆ ಏನು ಪ್ರಯತ್ನ ನಡಿದಿದೆ ಎಂದು ನಾನು ಕೇಳಂತ್ತೇನೆ. ಇದರಿಂದ ಯಾರಿಗೆ ನಿಜವಾಗಿ ಪ್ರಯೋಜನವಾಗಬೇಕು ಎಂದು ಸದುದ್ದೇಶವನ್ನು ಇಟ್ಟುಕೊಂಡು ಇದನ್ನು ತರಲಾಯಿತೋ ಅವರನ್ನು ಇವೊತ್ತು ಕೇಳುವವರೂ ಕೇಳುವವರೂ ಅವರು ಬೀದಿಯಲ್ಲಿ ಬಿದ್ದಿದ್ದಾರೆ. ಸುಗ್ರೀವಾಜ್ಞೆ ಬಂದ ಕೂಡಲೇ ನಮ್ಮ ಸ್ನೇಹಿತರು ಎಂದರೆ ಯೂತ್ ಕಾಂಗ್ರೆಸ್ಸಿನವರು ಇವೊತ್ತು ಯಾರು ಯಾರು ಇವರಿಗೆ ಆಗದೆ ಇರುವವರು ಇದ್ದಾರೆ, ಮಾರ್ಯಾದಸ್ಥರು ಇದ್ದಾರೆ ಅವರ ಮನೆಗೆ ಈ ಯೂತ್ ಕಾಂಗ್ರೆಸ್ಸಿನವರು ಯಾರ ನ್ನಾದರೂ ಹಿಡಿದುಕೊಂಡು ಹೋಗಿ ಅವರ ಮನೆಗೆ ನುಗ್ಗಿಸಿ ತಟ್ಟಿ, ನೀರು ಕುಡಿಯುವಲೋಟ, ತಂಬಿಗೆ ಹಂಡೆ ಇವುಗಳನ್ನೆಲ್ಲಾ ಹೊಡೆದುಕೊಂಡು ಹೋಗಿದ್ದಾರೆ. ನಮ್ಮ ಊರಿನಲ್ಲಿ ಎಂದರೆ, ತೀರ್ಥಹಳ್ಳಿಯಲ್ಲಿ ಒಬ್ಬರು ಒಂದು ಸಣ್ಣ ವ್ಯವಹಾರವನ್ನು ಮಾಡಿಕೊಂಡು ಗೌರವವಾಗಿದ್ದರು. ಅವರು ಗಿರವಿ ಇಟ್ಟು ಕೊಂಡಿದ್ದು ಸರಿಯಲ್ಲ ಎಂದು ಹೇಳಿದ್ದಾರೆ ಅವರನ್ನು ಆ ಗಿರವಿ ವಸ್ತುಗಳನ್ನು ಕೊಡಿ ಎಂದು ಕೇಳಿದ್ದರೆ ಅವರು ಕೊಡುತ್ತಿದ್ದರು. ಆ ರೀತಿ ಮಾಡದೆ ಈ ಯೂತ್ ಕಾಂಗ್ರೆಸ್ಸಿಗೆ ಸಂಬಂಧಪಟ್ಟವರು ದಂಡುಕಟ್ಟಿ ಕೊಂಡು ಅವರ ಮನೆಗೆ ಹೋಗಿ ಅವರಪತ್ನಿ ಪುತ್ರರನ್ನು ಹೆದರಿಸಿ ಅವರು ಅಡಿಗೆ ಮಾಡಿದಂತಹ ಪಾತ್ರೆ ಬಂಗಾರದ ಒಡವೆಗಳನ್ನೆಲ್ಲಾ ಹೊತ್ತು ತಂದರು. ಈ ಯೂತ್ ಕಾಂಗ್ರೆಸನಲ್ಲಿ ಯಾರಿದ್ದಾರೆ ಎಂದರೆ ಆ ಮಂಜಪ್ಪ, ಈ ಮಂಜಪ್ಪ, ಕಿಸಾನ್‌ಸೆಲ್ ಮಂಜಪ್ಪ ಎನ್ನುವವರೆ ಇದ್ದಾರೆ.

SRI S. M. SHEERNALI CHANDRASHEKHAR.—I rise a Point of order. The Hon'ble Chair told time and again that no Hon'ble Member should mention the names who cannot defend themselves here. Hon'ble Member Sri Konandur Lingappa twice or thrice mentioned som names who are not in a position to defend themselves here. I want a ruling from the Hon'ble Chair.

ಶ್ರೀ ಕೋಣಂದೂರುಲಿಂಗಪ್ಪ.—ಧರ್ಮಸ್ಥಳದ ಮಂಜುನಾಥಸ್ವಾಮಿಯನ್ನು ನಮ್ಮಕಡೆ ಮಂಜಪ್ಪ ಎಂದು ಕರೆಯುತ್ತಾರೆ. ಆದಕ್ಕಾಗಿ ನಾನು ಮಂಜಪ್ಪ ಎಂದು ಹೇಳಿದೆ.

MR. DEPUTY SPEAKER.—These are the only names the hon'ble member has mentioned.

SRI S. M. SHEERNALI CHANDRASHEKHAR.—Sri Konandur Lingappa categorically stated Manjappa.

ಶ್ರೀ ಕೋಣಂದೂರು ಲಿಂಗಪ್ಪ.—ಧರ್ಮಸ್ಥಳದ ಮಂಜುನಾಥೇಶ್ವರನನ್ನು ಮಂಜಪ್ಪ ಎಂದು ಕರೆಯುತ್ತಾರೆ. ಆ ಮಂಜಪ್ಪನನ್ನು ನಾನು ಹೇಳಿದ್ದು.

MR. DEPUTY SPEAKAR.—Mr Lingappa's trouble is the names can not be defended anywhere in any world. That is the real difficulty which we are facing. Wh does the Hon'ble Member come in his way?

SRI S. M. SHEERNALI CHANDRASHEKAR.—He said Kisan Cell Manjappa, and not Lord Manjappa.

ಶ್ರೀ ಕೊಣಂದೂರು ಲಿಂಗಪ್ಪ.—ನಾನು ಹೇಳಿದ್ದು ಆ ಮಂಜಪ್ಪನನ್ನು. ಆದುದರಿಂದ ಮಾನ್ಯ ಅಧ್ಯಕ್ಷರೇ, ಈ ರೀತಿ ನಮ್ಮಲ್ಲಿ ದೋಚಿಕೊಂಡು ಬಂದಂಥ ಬಂಗಾರ, ಒಡವೆ ವಸ್ತುಗಳು ಹಾಗೂ ಪಾತ್ರೆ ಪಗಡಗಳನ್ನು ಇವರು ಯಾರನ್ನು ಕರೆದುಕೊಂಡು ಹೋಗಿರುತ್ತಾರೆ ಅವರ ಮೂಲಕ ಮಾರಾಟ ಮಾಡಿಸುತ್ತಾರೆ. ನಂತರ ಇವರು ಯಾರಿಂದ ಅರ್ಜಿ ತೆಗೆದುಕೊಂಡು ಹೋಗಿರುತ್ತಾರೋ ಅವರಿಗೆ ೨೫,೫೦ ರೂಪಾಯಿ ಕೊಟ್ಟಹಾಗೆ ಮಾಡಿ ಉಳಿದಿದ್ದೆಲ್ಲ ಇವರು ತೆಗೆದು ಕೊಂಡರು ಅಷ್ಟೇ ಅಲ್ಲ, ಯಾರಾದರೂ ಮರ್ಯಾದಸ್ತರು, ಸ್ವಲ್ಪ ಅಳುಕು, ಅಂಜಿಕೆ ಇರತಕ್ಕ ಸಾತ್ವಿಕರು ಇದ್ದಾರೆ ಎಂದರೆ, ಅವರ ಮನೆಗೆ ಹೋಗಿ, ಹೀಗೆ ಅರ್ಜಿ ಬಂದಿದೆ ಇಷ್ಟನ್ನು ನೀವು ಕೊಡಲೇಬೇಕು ಎಂದು ಹೇಳುತ್ತಾರೆ. ಅವರು ಎಂತಹವರು ಎಂದರೆ ಕಾಂಗ್ರೆಸ್ ಕಿಸಾನ್ ಸೆಲ್‌ನವರು.

SRI S. M. SHEERNALI CHANDRASEKAR.—I raise a Point of order. He is attacking Mr. Manjappa

MR. DEPUTY SPEAKER.—Mr. Lingappa must have a sense of proportion. Firstly I was just marking him. He must be within the scope, He is a lawyer, I think he has taken a sanad. He is a law student at least. Even otherwise, he sometimes, speaks, like a lawyer. First, he must be within the scope. Why is he deviating to such other organisations which are not sought to be amended here ? It must fit in here. Mr. Chandrashekhar has some grievance. His vehemence is so much.

ಶ್ರೀ ಕೊಣಂದೂರು ಲಿಂಗಪ್ಪ.—ಇವತ್ತು ಹಳ್ಳಿಗಳಲ್ಲಿ ಇರತಕ್ಕಂಥ ಸಾತ್ವಿಕರಿಗೆ, ಸ್ವಲ್ಪ ಹೊಟ್ಟೆ ಬಟ್ಟೆಗೆ ಇರತಕ್ಕವರಿಗೆ ಕಿರುಕುಳ ನಡೆಯುತ್ತಾ ಇವೆ. ಅವರ ಬಗ್ಗೆ ಸರ್ಕಾರ ತೀವ್ರವಾದ ಶ್ರಮವನ್ನು ತೆಗೆದುಕೊಳ್ಳಬೇಕು. ನಮ್ಮಲ್ಲಿ ಒಬ್ಬರು ತಹಶೀಲ್ದಾರ್ ಬಂದಿದ್ದಾರೆ, ಅವರು ಬಹಳ ಒಳ್ಳೆಯವರು. ಹೀಗೆ ಲೂಟಿ ನಡೆಯುತ್ತಾ ಇದ್ದಾಗ ಅವರಿಗೆ ಹೇಳಿದೆ. ಆದುದರಿಂದ ಈಗ ಸ್ವಲ್ಪ ಬಂದೋಬಸ್ತ್ ಆಗಿದೆ. ಅವರು ನಾವು ಹೇಳುವ ಹಾಗೆ ಕೇಳದೆ ಇದ್ದು, ಆ ರೀತಿ ನಡೆದುಕೊಳ್ಳದೇ ಇದ್ದಿದ್ದರೆ ನಮ್ಮ ತಾಲ್ಲೂಕಿನ ಗತಿ ಏನಾಗುತ್ತಿತ್ತೊ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಆ ತಹಶೀಲ್ದಾರರು ನೀವು ಹೇಳಿದ ಹಾಗೆ ಕೇಳುವವರು ಎಂದು ಕಾಣುತ್ತದೆ.

ಶ್ರೀ ಕೊಣಂದೂರು ಲಿಂಗಪ್ಪ.—ನೀವು ಹೇಳುವ ಹಾಗೆ ಕೇಳುವವರಿದ್ದರೆ ನಾವು ಎಲ್ಲಿ ಇರುತ್ತಿದ್ದೆವೋ, ನೀವು ಎಲ್ಲಿ ಇರುತ್ತಿದ್ದಿರೋ. ಈಗ ಮುಖ್ಯವಾಗಿ ನಾನು ಹೇಳುವುದೇನೆಂದರೆ, ಈ ೩-೪ ತಿಂಗಳುಗಳ ಕಾಲದಲ್ಲಿ ಕೆಳಗೆ ತುಳಿಯಲ್ಪಟ್ಟ ಜನ ಯಾರಿದ್ದಾರೆ ಅವರು ಆಪತ್ಕಾಲಕ್ಕೆ ಸಿಕ್ಕಿದ್ದಾರೆ. ಅವರಿಗೆ ೫೦ ರೂಪಾಯಿ ಕೂಡ ಎಲ್ಲೂ ಸಿಕುತ್ತಾ ಇಲ್ಲ. ಅದಕ್ಕೆ ನೀವು ಏನಾದರೂ ಮಾಡಿ, ಸೊಸೈಟಿಗಳಲ್ಲಿ, ಬ್ಯಾಂಕುಗಳಲ್ಲಿ ಅವರಿಗೆ ಹಣ ಸಿಕ್ಕುವಂತೆ ಏರ್ಪಾಟು ಮಾಡಬೇಕು; ಡಿಎಆರ್ ಲೋನ್ ಕೊಡುವುದರಲ್ಲಿ ಕಮಿಷನ್ ಇರುತ್ತದೆ. ಮತ್ತೆ ಯಥಾಪ್ರಕಾರ ಬಡವರ ಹೆಸರಿನಲ್ಲಿ, ಬಡವರನ್ನು ಉದ್ಧಾರ ಮಾಡುತ್ತೇವೆ ಎನ್ನುವ ಗುರಾಣಿಯನ್ನಿಟ್ಟುಕೊಂಡು ಬಡವನಿಗೆ ೩ ಕಾಸೂ ಸಿಕ್ಕದೆ ಇರುವಂಥ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಆದುದರಿಂದ ಅಧಿಕಾರಿಗಳು ಅರ್ಜಿ ತೆಗೆದುಕೊಂಡು ಅದಕ್ಕೆ ತಕ್ಕ ರೀತಿಯಲ್ಲಿ ಬಿಡುಗಡೆ ಮಾಡಬೇಕು.

ಮಾನ್ಯ ಅಧ್ಯಕ್ಷರೇ, ಇವತ್ತು ಈ ಋಣವಿಮೋಚನ ಕಾಯಿದೆ, ಸುಗ್ರೀವಾಜ್ಞೆ ಎಲ್ಲಿಗೆ ಬಂದಿದೆ ಎಂದರೆ, ಕೊಟ್ಟವನು ಕೋಡಂಗಿ, ತೆಗೆದುಕೊಂಡವನು ವೀರಭದ್ರ ಎನ್ನುವ ಮಟ್ಟಕ್ಕೆ ಬಂದಿದೆ. ಆದರೆ ಇವತ್ತು ಅದು ತಿರುಗಮುರುಗ ಆಗಬಾರದು. ಕೊಟ್ಟವನು ವೀರಭದ್ರ ತೆಗೆದುಕೊಂಡವನು ಕೋಡಂಗಿ

ಯಾ ಬಾರದು. ತೆಗೆದುಕೊಂಡವನು ಅವನೇ ಸ್ವತಃ ಬಂದು ಹಣವನ್ನು ವಾಪಸ್ ಸಲ್ಲಿಸಬೇಕು. ಮತ್ತೆ ಕೆಲವರು ಸಾಲ ಕೊಡುತ್ತಾರೆ. ಆ ಹಣಕ್ಕೆ ಬಡ್ಡಿ ಅವರು ಆ ಹಣಕ್ಕೆ ಬಡ್ಡಿ ತೆಗೆದುಕೊಳ್ಳುವುದಿಲ್ಲ. ಅವರಿಂದ ಜನ್ಮಜನ್ಮಾಂತರ ದುಡಿಸಿಕೊಳ್ಳುತ್ತಾರೆ.

MR. DEPUTY SPEAKER.— Now I have to call some other Member to speak.

ಶ್ರೀ ಕೊಣಂದೂರು ಲಿಂಗಪ್ಪ.—ಇಷ್ಟನ್ನು ಹೇಳಿ, ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಮಾನ್ಯ ಉಪಾಧ್ಯಕ್ಷರೇ, ಈ ತಿದ್ದುಪಡಿಯ ಮೇಲೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರದಲ್ಲಿ ಅಸಿಸ್ಟೆಂಟ್ ಕಮಿಷನರಿಗೆ ಮ್ಯಾಜಿಸ್ಟ್ರೇಟ್‌ಗೆ ಈ ಋಣ ಪರಿಹಾರ ಕಾಯಿದೆಯನ್ನು ಜಾರಿಗೆ ತರಲು ಅಧಿಕಾರವನ್ನು ಕೊಟ್ಟಿದ್ದಾರೆ. ನಿಜವಾಗಿಯೂ ತಾಲ್ಲೂಕು ಎಕ್ಸಿಕ್ಯೂಟೀವ್ ಆಫೀಸರ್ ಬಹಳ ಬಿಜಿಯಾಗಿರುತ್ತಾರೆ. ಯಾವಾಗಲೂ ಲೆವಿ ವಸೂಲಿ ಮಾಡುವುದು, ಕಂದಾಯ ವಸೂಲ ಮಾಡುವುದು, ಮಂತ್ರಿಗಳ ಹಿಂದೆ ತಿರುಗತಕ್ಕಂಥಾದ್ದು. ಮತ್ತೆ ಇನ್ನೂ ಯಾವುಯಾವುದೋ ಕಾರ್ಯಗಳಿರುವುದರಿಂದ, ಈ ಕಾಯಿದೆ ಜಾರಿಯಲ್ಲಿ ಬಂದು ಜನಗಳಿಗೆ ಅನುಕೂಲವಾಗಲು ನಿಧಾನವಾಗುತ್ತದೆ. ಆದುದರಿಂದ ಇದಕ್ಕೋಸ್ಕರ ಸ್ಪೆಷಲ್ ಕಮಿಷನರನ್ನು ಮಾಡಿ ಈ ಕಾಯಿದೆಯನ್ನು ಜಾರಿಗೆ ಕೊಡಲು ಏರ್ಪಾಡು ಮಾಡಿದರೆ ಬೇಗ ಆಗುತ್ತಿತ್ತು ಮತ್ತು ಜನರಿಗೆ ಅನುಕೂಲವಾಗುತ್ತಿತ್ತು ಎಂದು ನನ್ನ ಅಭಿಪ್ರಾಯ. ನನ್ನ ಕ್ಷೇತ್ರದಲ್ಲಿ ಈ ಕಾಯಿದೆಯನ್ನು ದುರುಪಯೋಗಪಡಿಸಿಕೊಂಡಿದ್ದಾರೆ ನನ್ನ ಕ್ಷೇತ್ರದಲ್ಲಿ ನಿಜವಾಗಿಯೂ ಕಾನೂನು ಪ್ರಕಾರ ಅಸಿಸ್ಟೆಂಟ್ ಕಮಿಷನರಿಗೆ ಮಾತ್ರ ಈ ಅಧಿಕಾರವನ್ನು ಕೊಟ್ಟಿದ್ದೀರಿ. ಆದರೆ ವಿಲೇಜ್ ಅಕೌಂಟಂಟ್ಸ್, ಗ್ರಾಮಸೇವಕರು, ಪುಂಡುಪೋಕರಿಗಳು ಜನಗಳನ್ನು ಎದುರಿಸಿ ಸುಲಿಗೆ ಮಾಡುತ್ತಿದ್ದಾರೆ. ಯಾವುದೋ ಕಾಲದಲ್ಲಿ ಗಿರವಿ ಇಟ್ಟಿರುವುದನ್ನು, ಯಾರೋ ಗಿರವಿ ಇಟ್ಟಿರುವುದನ್ನು ಯಾರೋ ವಸೂಲಿ ಮಾಡುವುದಕ್ಕೆ ಹೊರಟಿದ್ದಾರೆ. ಆದುದರಿಂದ ತಾವು ಇಂತಹ ಅಧಿಕಾರಿಗಳ ಮೇಲೆ, ಇಂತಹ ಪುಡಾರಿಗಳ ಮೇಲೆ ಗಮನಹರಿಸಿ ಅವರ ಮೇಲೆ ಸ್ಟೆಪ್ಸ್ ತೆಗೆದುಕೊಳ್ಳಬೇಕಂ ಎಂದು ನಾನು ಕೇಳಿಕೊಳ್ಳುತ್ತೇನೆ. ಗಿರವಿ ಇಟ್ಟುಕೊಂಡಿರುವವರಂ, ಭೋಗ್ಯ, ಆಧಾರ ಮಾಡಿಕೊಂಡಿರುವವರು ಎಲ್ಲರೂ ಶ್ರೀಮಂತರಲ್ಲ. ಹೊಟ್ಟೆ ಬಟ್ಟೆ ಕಟ್ಟಿ ಜಮೀನು ಮಾಡಿಕೊಂಡಿರುವವರೂ, ಭೋಗ್ಯ ಮಾಡಿಕೊಂಡಿರುವವರೂ ಇದ್ದಾರೆ, ಅನೇಕ ಬಡವರು ಸಣ್ಣ ಪುಟ್ಟ ಪಾತ್ರೆಗಳನ್ನು ಗಿರವಿ ಇಟ್ಟುಕೊಂಡಿರುವವರೂ ಇದ್ದಾರೆ. ನಿಜವಾಗಿಯೂ ಅವರಿಗೆ ಇನ್‌ಕಂ ಕಡಿಮೆ ಇರುತ್ತದೆ. ಈ ಕಾನೂನನ್ನು ಜಾರಿಗೆ ತರುವಾಗ ಅಂತಹ ಬಡ ಜನಗಳಿಗೆ ಅನ್ಯಾಯ ಆಗದೇ ಇರುವ ಹಾಗೆ ಮಾಡಬೇಕು ಎಂದು ನಾನು ಕೇಳಿಕೊಂಡು, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

ಶ್ರೀ ಕೆ. ಎಚ್. ರಂಗನಾಥ್.—ಸನ್ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ಬಗ್ಗೆ ಯಾರೂ ವಿರೋಧ ಮಾಡಲಿಲ್ಲ. ವಿಕೇಂದ್ರೀಕರಣವಾಗಬೇಕೆಂದು ಹೇಳಿದ್ದಾರೆ. ಅದೇ ರೀತಿ ಕೆಲವರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಕಾರ್ಯರೂಪಕ್ಕೆ ತರುವಾಗ ತೊಂದರೆಯಾಗುತ್ತದೆಂದು ಹೇಳಿದ್ದಾರೆ. ಒಂದು ವಿಷಾದವಾದ ಸಂಗತಿ ಏನೆಂದರೆ ಮಾತನಾಡಿದವರಂ ಯಾರೂ ಅನ್ಯಥಾ ಭಾವಿಸಬಾರದು, ಈ ಬಗ್ಗೆ ಯಾರಿಂದಲೂ ಕೂಡ ಒಂದು ಕಾಗದ ಕೂಡ ಬರಲಿಲ್ಲ. ನನ್ನ ಕ್ಷೇತ್ರದಲ್ಲಿ ಇಂಥಾದ್ದು ಹೀಗಾಯಿತಂ, ಅಂಥಾದ್ದು ಹೀಗಾಯಿತು ಎಂದು ಹೇಳಿದ್ದರೆ ನಾನು ನಿಜವಾಗಿಯೂ ಅದನ್ನೆಲ್ಲಾ ವಿಚಾರಿಸುತ್ತಿದ್ದೆ. ಕಾನೂನು ಪ್ರಕಾರ ಅಧಿಕಾರಿಗಳು ಏನು ದುರುಪಯೋಗ ಮಾಡಿದ್ದಾರೋ ಅದರ ಬಗ್ಗೆ ವಿಚಾರ ಮಾಡುತ್ತಿದ್ದೆ. ಮಾನ್ಯ ಶ್ರೀ ಶಾಮಣ್ಣನವರು ಮಾತನಾಡುತ್ತಾ ಯೂತ್ ಕಾಂಗ್ರೆಸ್‌ನವರು ಈ ರೀತಿ ಅನ್ಯಾಯ ಮಾಡಿದರು ಎಂದು ಹೇಳಿದರು. ಅದನ್ನು ನಂಬುವುದು ಹೇಗೆ. ಅದು ಈಗ ವ್ಯಾಪಕವಾಗಿ ಹೋಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ನಾನು ಹೇಳುವುದೂ ಅಲ್ಲದೆ ಬರವಣಿಗೆಯಲ್ಲಿಯೂ ಕೂಡ ಕೊಡುತ್ತಿದ್ದೇನೆ.

ಶ್ರೀ ಕೆ. ಎಚ್. ರಂಗನಾಥ್.—ಶಾಸಕರಾದಮೇಲೆ ಕಾನೂನು ಬಾಹಿರವಾಗಿ ಏನಾದರೂ ಅನ್ಯಾಯಗಳು ನಡೆದರೆ ಅಂಥಾದ್ದನ್ನು ಸರ್ಕಾರಕ್ಕೆ ಬರೆಯಂವುದು ಒಳ್ಳೆಯದು. ಮಾನ್ಯ ಸದಸ್ಯರು ಯಾವಾಗ ಬೇಕಾದರೂ ಬರೆಯಬಹುದು. ಕಾನೂನು, ಅಧಿಕಾರ ದುರುಪಯೋಗ ಮಾಡಿದರೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರೆಲ್ಲರೂ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಕ್ಕಾಗಿ ಅವರಿಗೆ ನಾನು ವಂದಿಸುತ್ತೇನೆ.

MR. DEPUTY SPEAKER.—The question is :

"That the Karnataka Debt Relief (Amendment) Bill, 1976 be taken into consideration."

The motion was adopted

CLAUSES 2 to 5.

MR. DEPUTY SPEAKER.—The question is :

"That Clauses 2 to 5, both inclusive, do stand part of the Bill."

The motion was adopted

Clauses 2 to 5, both inclusive, were added to the Bill.

CLAUSE 1, Etc.

MR. DEPUTY SPEAKER.—The question is :

"That Clause 1, the long Title the Preamble and the Enacting formula do stand part of the Bill."

The motion was adopted

Clause 1, the long Title, the Preamble and the Enacting formula were added to the Bill.

Motion to Pass

SRI K. H. RANGANATH.—Sir, I beg to move ;

"That the Karnataka Debt Relief (Amendment) Bill, 1976 be passed"

MR DEPUTY SPEAKER.—The question is :

'That the Karnataka Debt Relief (Amendment) Bill, 1976 be passed."

The motion was adopted and the Bill was passed